ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Thursday, the 9th May 1974 (Vaishaka 19, 1896 S.E.)

The House met in the Assembly Chamber, Vidhana Soudha, Twelwe o'clock.

MADAM SPEAKER —(SMT. K. S. NAGARATHNAMMA) in the Chair.

STARRED QUESTIONS

(To which Oral Answers were given)

SHIRADWAD JANWAD PROTECTED DRINKING WATER SUPPLY SCHEME

73. SRI J. S. AMMANNAVAR (Sadalga).—Will the Minister for Health be pleased to state:—

(*a*) whether the Shiradwad-Janwad Protected Drinking Water Supply Scheme in Chikodi taluk has been sanctioned by the Government ;

(*b*) if so, the year and date of the sanction ;

(*c*) whether the work has been started ;

(*d*) if not, when it will be started and the reasons for the delay ?

SRI H. SIDDAVEERAPPA (Minister for Health).—

(*a*) Yes.

(*b*) 31-5-1965.

(*c*) Yes.

(*d*) Does not arise.

ಶ್ರೀ ಜೆ ಎಸ್. ಅಮ್ಮಣ್ಣನವರ್ —ಮಾನ್ಯ ಅಧ್ಯಕ್ಷರೇ, ಇಲ್ಲಿ ನಾನು (೩) ಪ್ರಶ್ನೆಯಲ್ಲಿ ಕೆಲಸ ಪ್ರಾರಂಭವಾಗಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಆರೋಗ್ಯ ಸಚಿವರು 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಒಂದೆರಡು ಕಡೆಗಳಲ್ಲಿ ಬೋರ್‌ವೆಲ್ಲುಗಳನ್ನು ಕೊರೆದು ಕೆಲಸಗಳನ್ನು ಅಲ್ಲಿಗೆ ಕೈಬಿಟ್ಟಿದ್ದಾರೆ. ನಾನು

(ಶ್ರೀ ಜೆ ಎಸ್. ಅಮ್ಮಣ್ಣವರ್)

ನನ್ನ ಊರಿಗೆ ಹೋಗಬೇಕಾದರೆ ಈ ಊರನ್ನು ಹಾದೇ ಹೋಗಬೇಕು ಈ ಕೆಲಸವಾಗದೆ ಇರುವುದರಿಂದ ಜನರ ಕಾಟಕ್ಕಾಗಿ ಅಲ್ಲಿ ಓಡಾಡುವುದನ್ನು ಸಹಿತ ನಾನು ಕೈಬಿಟ್ಟಿದ್ದೇನೆ. ಅಲ್ಲಿ ಈ ಕೆಲಸವನ್ನು ಪಾ ರಂಭ ಸಹಿತ ಮಾಡಿಲ್ಲ. ನಾನು ಈ ಮಾನ್ಯ ಸಭೆಯಲ್ಲಿ ಹೀಗೆ ಹೇಳುತ್ತಿರುವುದು ಸುಳ್ಳಾದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಆದುದರಿಂದ ಸರ್ಕಾರದವರು ಅಲ್ಲಿಗೆ ನನ್ನ ಜೊತೆಯಲ್ಲಿ ಯಾರನ್ನಾದರೂ ಕಳುಹಿಸಿ ನಾನು ಹೇಳುತ್ತಿರುವುದು ನಿಜವೋ ಸುಳ್ಳೋ ಎಂಬುದನ್ನು ಪರಿಶೀಲನೆ ಮಾಡುತ್ತಾರೆಯೇ ?

† ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರು ಸ್ವಲ್ಪ ಸಮಾಧಾನ ಚಿತ್ತರಾಗಬೇಕು, ಸಾವಧಾನದಿಂದ ಕೇಳಬೇಕು. ನಾನು ಇಲ್ಲಿ ಕೊಟ್ಟಿರತಕ್ಕ ಉತ್ತರ ಸುಳ್ಳೇನೂ ಇಲ್ಲ. ಇದರ ಹಿನ್ನೆಲೆಯಾಗಿ ಒಂದು ದೊಡ್ಡ ಕಥೆಯೇ ಇದೆ. ಮೊದಲು ಈ ಕೆಲಸ ತಾರೀಖು ೩೧ನೇ ಮೇ ೧೯೬೫ರಲ್ಲಿ ೨ ಲಕ್ಷದ ೩೭ಸಾವಿರದ ಐನೂರು ರೂಪಾಯಿಗಳಿಗೆ ಮಂಜೂರಾಯಿತು. ಆಗ ಅದಕ್ಕೆ ಸಂಬಂಧಪಟ್ಟ ಪಟೇಲಾಯಿತಿಯವರು ಹೆಚ್ಚಿದ ರೇಷ ೫೦ರಷ್ಟು ಹಣವನ್ನು ಕೊಡಬೇಕಾಗಿತ್ತು. ಅವರು ಆ ಹಣವನ್ನು ಸರ್ಕಾರಕ್ಕೆ ಕೊಡಲಿಲ್ಲ ಎಂದು ಅವರಿಂದ ಅದನ್ನು ರಿಕವರ್ ಮಾಡುವುದಕ್ಕೆ ಪ್ರಯತ್ನ ಮಾಡಲಾಯಿತು. ಆದರೆ ಆ ಪಂಚಾಯಿತಿಯಿಂದ ಹಣ ಬಾರದಿದ್ದರೂ ಚಿಂತೆಯಿಲ್ಲ ಎಂದು ಹೇಳಿ ಟೆಂಡರನ್ನು ಕರೆಯಲಾಯಿತು ಅದಕ್ಕೂ ಸಾಕಷ್ಟು ರೆಸ್‌ಪಾನ್ಸ್ ಬರಲಿಲ್ಲ. ಆಗ ಮತ್ತೆ ಜಾಕ್‌ವೆಲ್ ತೋಡಲು ಪೀಸ್‌ವರ್ಕ್ ಮೇಲೆ ಕೆಲಸವನ್ನು ಪ್ರಾರಂಭ ಮಾಡಲಾಯಿತು ಆ ದೂರ್‌ಗಂಗಾ ನದಿಯಲ್ಲಿ ಬೋರ್‌ವೆಲ್ಲನ್ನು ಹಾಕಲು ಕೆಲಸ ಶುರುವಾಯಿತು. ಆದಕ್ಕೆ ಕೆಲವರು ಅಲ್ಲಿ ಬಾವಿ ತೋಡಿದರೂ ನೀರು ಬರುವುದಿಲ್ಲ ಎಂದು ಹೇಳಿದ್ದರಿಂದ ಆ ಕೆಲಸವನ್ನು ಅಷ್ಟಕ್ಕೆ ಕೈಬಿಡಲಾಯಿತು. ಆದಾದನಂತರ ಈ ಶಿರದವಾಡ್‌ನಲ್ಲಿ ಒಂದು ಬಾವಿ ಮತ್ತು ಜಾನವಾಡದಲ್ಲಿ ಎರಡು ಬಾವಿಗಳನ್ನು ತೆಗೆಯುವುದಕ್ಕೆ ಆರ್ಡರಾಗಿ ೧೯೭೨ನೇ ಡಿಸೆಂಬರದಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದಾಯಿತು. ಆದರೆ ದುರ್ದೈವದಿಂದ ಅಲ್ಲಿಯೂ ನೀರು ಬರದೆ ಆ ಬಾವಿಗಳೂ ಕೂಡ ಫೈಲಾದವು. ಆದಾದನಂತರ ಅಲ್ಲಿಯ ಸೂಪರಿಂಟೆಂಡಿಂಗ್ ಇಂಜಿನಿಯರು ೭ನೇ ಜುಲೈ ೧೯೭೩ರಲ್ಲಿ ೧೨ ಡಯಾಮೀಟರಿರತಕ್ಕ ಒಂದು ಪರ್ಕೂಲೇಷನ್ ಬಾವಿಯನ್ನು ಡೌನ್‌ಸ್ಟ್ರೀಮಿನಲ್ಲಿ, ೪ ಲಕ್ಷ ೩೬ ಸಾವಿರದೈನೂರು ರೂಪಾಯಿಗಳ ವೆಚ್ಚದಲ್ಲಿ ತೆಗೆಯುವುದಕ್ಕೆ ಎಲ್ಲ ಪ್ರೊಪೆಸ್ ಆಗಿ ಅದು ಸರ್ಕಾರದ ಮುಂದೆ ಒಪ್ಪಿಗೆಗಾಗಿ ಬಂದಿದೆ. ಅದಕ್ಕೆ ಒಪ್ಪಿಗೆ ದೊರೆತ ಕೂಡಲೆ ಅಲ್ಲಿ ಕೆಲಸ ಪ್ರಾರಂಭವಾಗುವುದು. ಈ ಮಧ್ಯೆ ಅಲ್ಲಿ ಜನರಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ವ್ಯವಸಾಯದ ಬಾವಿಯೊಂದರಿಂದ ನೀರನ್ನು ಸರಬರಾಯಿ ಮಾಡುತ್ತಿದ್ದಾರೆ. ಆದರೆ ಸರ್ಕಾರದವರು ಅಲ್ಲಿ ಈ ಕಾರ್ಯಕ್ಕೆ ಎಷ್ಟೇ ಹಣ ಖರ್ಚಾಗಲಿ ಆ ಕೆಲಸವನ್ನು ನಿಲ್ಲಿಸುವುದಿಲ್ಲ. ಅದನ್ನು ಮಾಡೇ ತೀರುತ್ತಾರೆ

ಶ್ರೀ ಜೆ. ಎಸ್ ಅಮ್ಮಣ್ಣನವರ್.—ದೂದ್‌ಗಂಗಾ ಹೊಳೆಯಲ್ಲಿ ಬಾವಿ ತೆಗೆಯುವುದನ್ನು ಯಾರೋ ಬೇಡವೆಂದರೆಂದು ಅದನ್ನು ನಿಲ್ಲಿಸಿದ್ದು ಸರಿಯಲ್ಲ. ಆ ಜಾಗಕ್ಕೆ ಆ ಮೊದಲಿನ ಪ್ಲಾನೇ ಸರಿಯಾದದ್ದು. ಏಕೆಂದರೆ ಅಲ್ಲಿ ಈಗ ಅದೇ ದೂದ್‌ಗಂಗಾದಲ್ಲಿ ಒಂದು ಬಾವಿ ತೆಗೆದು ಅಲ್ಲಿಂದ ನಿಪ್ಪಾಣಿಗೆ ದಿನವಹಿ ನೀರನ್ನು ಒದಗಿಸಲಾಗುತ್ತಿದೆ. ದಿನಂಪ್ರತಿ ೩೪–೩೫ ಟ್ರಕ್ ನೀರು ಅಲ್ಲಿಂದ ತೆಗೆದುಕೊಂಡು ಹೋದಾಗ್ಯೂ ಆ ಬಾವಿಯಲ್ಲಿ ನೀರು ಈ ಬೇಸಿಗೆಯಲ್ಲಿ ಕೂಡ ಓವರ್‌ಫ್ಲೋ ಆಗುತ್ತಿದೆ. ಆದರೆ ೧೯೬೮ರಲ್ಲಿ ಸಡಲಗಕ್ಕೂ ಹೀಗೆ ಒಂದು ನೀರು ಸರಬರಾಯಿ ಸ್ಕೀಮನ್ನು ಮಾಡಿ ಅದನ್ನು ಕಾರ್ಯಗತ ಮಾಡಲಿಲ್ಲ. ಅಂತೂ ಅಲ್ಲಿನ ಕೆಲಸಗಳ ಬಗ್ಗೆ ಸರ್ಕಾರಕ್ಕೆ ಬಹಳ ಉದಾಸೀನತೆ ಇದ್ದಂತೆ ಕಾಣುತ್ತಿದೆಯಾದ್ದರಿಂದ ನಾನು ಇದರ ಇತ್ಯರ್ಥಕ್ಕಾಗಿ ಮಾನ್ಯ ಸಚಿವರ ಮನೆಯ ಮುಂದೆ ಉಪವಾಸ ಸತ್ಯಾಗ್ರಹ ಕೂಡ ಹೂಡಬೇಕಾಗಿ ಬರಬಹುದು. ಇದಕ್ಕೆ ಅವಕಾಶ ಕೊಡದಂತೆ ಈ ಕೆಲಸವನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಶೀಘ್ರದಲ್ಲೆ ಚೀಫ್ ಇಂಜಿನಿಯರನ್ನೂ ಮತ್ತು ಅಲ್ಲಿಯ ಸೂಪರಿಂಟೆಂಡಿಂಗ್ ಇಂಜಿನಿಯರನ್ನೂ ಮತ್ತು ಮಾನ್ಯ ಸದಸ್ಯರಾದ ಅಮ್ಮಣ್ಣನವರನ್ನೂ ಇಟ್ಟುಕೊಂಡು ವಿಚಾರ ಮಾಡಿ ಇದನ್ನು ಬಗೆಹರಿಸುತ್ತೇನೆ.

Asterisks indicate that remarks or speeches have not been revised by the member concerned.